**ದಿನಾಂಕ: 08–11–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | **ಕೌನ್ಸಿಲ್ ಕಾರ್ಯದರ್ಶಿ** |
| 2 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 3 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 4 | ವಲಯ ಅರಣ್ಯಾಧಿಕಾರಿಗಳು–(ಪೂರ್ವ/ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ) |
| 5 | ಶ್ರೀಮತಿ.ಲಕ್ಷ್ಮಿ | ಸದಸ್ಯರು | 5 | |
| 6 | ಶ್ರೀ.ಎಸ್.ಗಂಗಾಧರ್ | ಸದಸ್ಯರು | 6 | ಕಾ.ಪಾ.ಅ.(ಯೋಜನೆ–ಕೆರೆಗಳು)&(ಕೆರೆಗಳು–ಪರಿಸರ ಕೋಶ 1,2,3,4,5,) |
| 7 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 7 | ತೋಟಗಾರಿಕೆ ಅಧೀಕ್ಷಕರು – (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ) |
| 8 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 9 | ಶ್ರೀಮತಿ.ಸರಳ | ಸದಸ್ಯರು | 8 | ಕಾ.ಪಾ.ಅ.(ಯೋಜನೆ – (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ) |
| 10 | ಶ್ರೀ.ತಿಮ್ಮರಾಜು | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

2012–13ನೇ ಸಾಲಿನ ಕಾರ್ಯಕ್ರಮ ಪಟ್ಟಿಯು ಯಾವ ಹಂತದಲ್ಲಿದೆ ಹಾಗೂ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಸಮಿತಿಯು ಈಗಾಗಲೇ ಟೆಂಡರ್ ಕರೆಯಲು ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ಟೆಂಡರ್ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸೂಚಿಸಿದರು.

ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಹಳೆಯ ನೆಡುತೋಪುಗಳ ನಿರ್ವಹಣೆ, ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಅವಶ್ಯಕತೆ ಇರುವ ವೃಕ್ಷಕವಚಗಳ ಸರಬರಾಜಿನ ಬಗ್ಗೆ ಹಾಗೂ ಮರಗಳ ವ್ಯವಸ್ಥಿತ *ನಿರ್ವಹಣೆಗೆ ಸಂಬಂಧಪಟ್ಟಂತಹ ಟೆಂಡರ್ ಕಡತಗಳು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ಟೆಂಡರ್ ಕರೆದಿರುವ ಕಡತಗಳನ್ನು ಕೂಡಲೇ ಸಮಿತಿಗೆ ಮಂಡಿಸುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು. ದಿನಾಂಕ:04–10–2012ರ ಸಭೆಯಲ್ಲಿ ಸಮಿತಿಯು ತೆಗೆದುಕೊಂಡ ನಿರ್ಣಯದಂತೆ, ಕಾಯಕ್ರಮ ಪಟ್ಟಿಯನ್ನು ತಯಾರಿಸಿ ಸಮಿತಿಯ ಅನುಮೋದನೆ ಪಡೆಯುವಂತೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.*

*ಪಾಲಿಕೆಯ 198 ಸದಸ್ಯರ ವಾರ್ಡ್‌ಗಳಿಗೆ ವಲಯವಾರು ಟ್ರೀಗಾರ್ಡ್ ಟೆಂಡರ್ ಕರೆದಿದ್ದು, ಟೆಂಡರ್‌ನಲ್ಲಿ ಟ್ರೀಗಾರ್ಡ್ ಸರಬರಾಜು ಮಾಡದೇ ಬಾಕಿ ಉಳಿದಿರುವ ಟ್ರೀಗಾರ್ಡ್‌ಗಳನ್ನು ಅವಶ್ಯಕತೆ ಇರುವ ಸದಸ್ಯರ ವಾರ್ಡ್‌ಗಳಿಗೆ ಸರಬರಾಜು ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.*

**ಮುಂದುವರೆದಿದೆ. . . . . .**

**<u>ಉಪ ಅರಣ್ಯ ಸಂರಕ್ಷಣಾಧಿಕಾರಿ</u>** : ಟ್ರೀ ಗಾರ್ಡ್‌ಗಳನ್ನು ಸರಬರಾಜು ಮಾಡಲು ಕಳೆದ ವರ್ಷ ಟೆಂಡರ್ ಕರೆದು 11 ತಿಂಗಳಿನಲ್ಲಿ ಸರಬರಾಜು ಮಾಡಬೇಕೆಂದು ಆದೇಶ ನೀಡಲಾಗಿತ್ತು. ಆದರೆ, ಸರಬರಾಜು ಮಾಡಲು ಆದೇಶ ನೀಡಿರುವ ಅವಧಿ ಮುಗಿದು ಹೋಗಿದೆ. ಆದರೂ ಸಹ ಸದರಿ ಸಂಸ್ಥೆಯವರಿಂದ ಉಳಿಕೆ ಇರುವ ಟ್ರೀಗಾರ್ಡ್‌ಗಳನ್ನು ಹಳೆಯ ದರಕ್ಕೆ ತೆಗೆದುಕೊಳ್ಳಬಹುದೆಂದು ಸಲಹೆ ನೀಡಿದರು.

**ಅಧ್ಯಕ್ಷರು,** ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/24/12-13, ದಿನಾಂಕ:31-10-2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವತಿಯಿಂದ ಉಪ ವಿಭಾಗ-1 ರ ವ್ಯಾಪ್ತಿಗೆ ಬರುವ ನಾಲ್ಕು ವಲಯಗಳಾದ ಪೂರ್ವ, ಯಲಹಂಕ, ದಾಸರಹಳ್ಳಿ ಮತ್ತು ಮಹದೇವಪುರ ವಲಯಗಳಲ್ಲಿ 2012ನೇ ಮಳೆಗಾಲದಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆಗಾಗಿ ಅವಶ್ಯಕವಿರುವ ಬೊಂಬು ವೃಕ್ಷ ಕವಚಗಳನ್ನು ಸರಬರಾಜು ಮಾಡುವ ಕಾಮಗಾರಿಯು ಋತುಮಾನಕ್ಕನುಗುಣವಾಗಿದ್ದು, ತುರ್ತು ಸಂದರ್ಭಾನುಸಾರ ನಿರ್ವಹಿಸ ಬೇಕಾಗಿರುವುದರಿಂದ ಇ-ಪ್ರಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಕಡತಗಳನ್ನು ಅರಣ್ಯ ಘಟಕದ ವತಿಯಿಂದ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕಡತಗಳಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗೆ ಅಗತ್ಯವಿರುವ 55000 ಸಂಖ್ಯೆಯ ಬೊಂಬು ವೃಕ್ಷ ಕವಚಗಳ ಸರಬರಾಜಿನ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.134.05 ಲಕ್ಷಗಳಾಗಲಿದ್ದು, ಸದರಿ ಕಡತಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:30-10-2012 ರ ಟಿಪ್ಪಣಿ.

**<u>ನಿರ್ಣಯ:-</u> ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:30-10-2012 ರ ಟಿಪ್ಪಣಿಯನ್ನು ಒಪ್ಪಲಾಯಿತು.**

**2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/25/12-13, ದಿನಾಂಕ:07-11-2012</u>**

2012-13ನೇ ಸಾಲಿನ ಆಯವ್ಯಯಕ್ಕೆ ಘನ ಸರ್ಕಾರವು ಆದೇಶ ಸಂಖ್ಯೆ.ನ.ಅ.ಇ/ಎಂ.ಎನ್.ಯು. 2012, ದಿನಾಂಕ:28-08-2012ರಲ್ಲಿ ಅನುಮೋದನೆ ನೀಡಿರುತ್ತದೆ. ಸದರಿ ಆಯವ್ಯಯದಲ್ಲಿ 12 ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಶೀರ್ಷಿಕೆ ಅಡಿಯಲ್ಲಿನ ಉಪ ಶೀರ್ಷಿಕೆ 'ಕೆರೆಗಳು' ರಲ್ಲಿ ಹೊಸ ಕೆರೆಗಳ ಅಭಿವೃದ್ಧಿಗೆ ಪಿ ಕೋಡ್ 2175 ರಲ್ಲಿ ರೂ.20.00 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ.

- ಅ) ಸದರಿ ಅನುದಾನಕ್ಕೆ ಸಂಬಂಧಿಸಿದಂತೆ ಒಟ್ಟು 9 ಕೆರೆಗಳ ಅಭಿವೃದ್ಧಿಯನ್ನು ಉದ್ದೇಶಿಲಾಗಿರುತ್ತದೆ. 2012-13ನೇ ಸಾಲಿಗೆ ಅಗತ್ಯವಾದ ಅಂದಾಜು ಮೊತ್ತ ರೂ.1672.00 ಲಕ್ಷಗಳಾಗಿರುತ್ತದೆ.
- ಆ) ಅಭಿವೃದ್ಧಿಗೊಂಡ ಕೆರೆಗಳ ನಿರ್ವಹಣೆಗಾಗಿ ಒಟ್ಟು 10 ಕಾಮಗಾರಿಗಳಿದ್ದು, ಅವುಗಳ ಅಂದಾಜು ಮೊತ್ತ ರೂ.184.00 ಲಕ್ಷಗಳಾಗಿರುತ್ತವೆ.
- ಇ) ಬಿ.ಡಿ.ಎ. ಹಾಗೂ ಎಲ್.ಡಿ.ಎ. ವಶದಿಂದ ಕ್ರಮವಾಗಿ 7 ಕೆರೆಗಳು ಹಾಗೂ 5 ಅಭಿವೃದ್ಧಿಗೊಂಡ ಕೆರೆಗಳನ್ನು ನಿರ್ವಹಣೆಗಾಗಿ ಪಡೆಯಲಾಗಿದ್ದು, ಸದರಿ ಕೆರೆಗಳ ನಿರ್ವಹಣೆಗಾಗಿ ಒಟ್ಟು 11 ಕಾಮಗಾರಿಗಳಿದ್ದು, ಅವುಗಳ ಅಂದಾಜು ಮೊತ್ತ ರೂ.144.00 ಲಕ್ಷಗಳಾಗಿರುತ್ತದೆ.

**ಮುಂದುವರೆದಿದೆ. . . .**

ಮೇಲೆ ವಿವರಿಸಿದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಿದೆ. ಸದರಿ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:03–11–2012 ರ ಟಿಪ್ಪಣಿ.

**ನಿರ್ಣಯ:–** **ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:03–11–2012 ರ ಟಿಪ್ಪಣಿಯನ್ನು ಒಪ್ಪಲಾಯಿತು.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು, ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ